ಪ್ರಸ್ತಾಪಿಸಿದ್ದಿತ್ತು. ಅಪ್ಪನ ಅದೇ ಖಡಾಖಂಡಿತ ನಿಲುವು. ಗುರಣ್ಣ ಬಂದಾಗಲೂ ಚರ್ಚೆಯಾಯಿತು. ಅವರಿಬ್ಬರೂ ಸೋಲಲಿಲ್ಲ. ಇವುಗಳ ಮಧ್ಯೆ ನನ್ನ ಬಿ.ಎಸ್ಸಿ. ಪರೀಕ್ಷೆ ಮುಗಿಯಿತು. ಅತ್ತಿಗೆ ಹೊಸ ಸುದ್ದಿ ನೀಡಿದಳು. ಎಲ್ಲರಲ್ಲಿಯೂ ಹರ್ಷ ಮೂಡಿತ್ತು. ಕುಬುಸ... ಶೀಮಂತಗಳಾಗಿ ಅವಳನ್ನು ಹೆರಿಗಾಗಿ ತೌರಿಗೆ ಕಳಿಸಿದ್ದೂ ಆಯಿತು.

ವರ್ಷ ಉರುಳಿದಂತೆ ಚಂದ್ರು ಬಂದಿದ್ದ. ಮತ್ತೆ ಉಡುಗೊರೆಗಳನ್ನು ಹೊತ್ತು ತಂದಿದ್ದ. ಆಸೆಯ ಕಂದೀಲು ಉರಿಸಿದ್ದ. ಈ ಬಾರಿ ನೇರವಾಗಿ ವಸುಮತಿ ಕನ್ಯಾರ್ಥಿಯಾಗಿ ಬಂದಿದ್ದಳು. "ಪುಷ್ಪಾ... ಎಂದಿಂದೂ ನಮ್ಮ ಮನಿ ಹುಡುಗಿ ಅನ್ನೊಂಡೇವಿ. ಹೂವಿನ್ಹಂಗ ನೋಡಕೋತೇವಿ. ಚಂದ್ರುಗ ಕೊಡ್ರಿ" ಎಂದು ಕೇಳಿದಳು. ಅಪ್ಪ ನೇರವಾಗಿಯೇ, "ಬ್ಯಾಡವಾ... ಮಗಳ್ನ ಪರದೇಶಕ್ಕ ಕಳಸೂದುಲ್ಲಾ" ಎಂದುಬಿಟ್ಟರು. ಎರಡೇ ದಿನಗಳಲ್ಲಿ ಸ್ನೇಹಿತೆಯ ಮನೆಯಿಂದ ಬರುವಾಗ ಹಿಂದೆ ಬಂದವ, "ನೀ ಏನಂತೀ ಪುಷ್ಪಾ. ಉತ್ತರಾ ಹೇಳು..." ಎಂದಿದ್ದ. ನನಗೋ... ಅಪ್ಪ ಹಾಗೂ ಅಣ್ಣನನ್ನು ಎದುರಿಸುವ ಧೈರ್ಯವಿರಲಿಲ್ಲ. ಅಮ್ಮನೂ ಇದಕ್ಕೆ ಹೊರತಾಗಿರಲಿಲ್ಲ. ಹೇಳಲು ಏನೂ ಉಳಿದಿರಲಿಲ್ಲ. ಮನದಲ್ಲಿ ಕೊರಗಿದ್ದೇ ಬಂತು. ಕೆಲವೇ ದಿನಗಳಲ್ಲಿ ಬೆಳಗಾವಿಯ ಹುಡುಗಿ ಮೈಥಿಲಿಯೊಡನೆ ಅವನ ಮದುವೆ ನಿಶ್ಚಯವಾಗಿತ್ತು. ತಿಂಗಳ ನಂತರ ಮದುವೆ ವಿಜೃಂಭಣೆಯಿಂದ ಜರುಗಿತು. ಅಮ್ಮನ ಮುಖವೂ ಸಪ್ಪೆಯಾಗಿತ್ತು. ಮೊದಲಿನಂತೆ ಆನಂದದಿಂದ ಪಾಲ್ಗೊಳ್ಳಲಾಗಿರಲಿಲ್ಲ. ಸರಜಕ್ಕನೇ ಬಂದು, "ವಿಮಲಕ್ಕ... ನಾನು, ನೀವೂ ಅಕ್ಕ ತಂಗ್ಯಂದಿರಿದ್ದಂಗ. ಋಣಾನುಬಂಧ ಇಲ್ಲಾ ಅನ್ನೋದು... ಅಷ್ಟ. ಆದರ ನಮ್ಮ ಸಂಬಂಧ ಮದಲಿನ್ಹಂಗ ಇರಬೇಕು. ನೀವು ಮೊದಲಿನ್ಹಂಗ ಎಲ್ಲಾದಕ್ಕೂ ಬರಬೇಕು" ಎಂದು ಕೈಹಿಡಿದು ಕಣ್ತುಂಬಿಕೊಂಡಿದ್ದರು. ಅಮ್ಮನ ಕಣ್ಣಲ್ಲೂ ನೀರು. ಅಟ್ಟದ ಕೋಣೆಯಲ್ಲಿ ಕುಳಿತ ನನ್ನ ಕಣ್ಣುಗಳು ಹರಿಯುತ್ತಿದ್ದವು. ಪಕ್ಕದ ಮನೆಯಲ್ಲಿ ಸಂಭ್ರಮ ಆರಂಭವಾದಂತೆ ನಾನೆಷ್ಟು ವಿಲಪಿಸಿದೆನೊ ಗೊತ್ತಿಲ್ಲ. ಆಗಲೇ ನನಗೆ ಗೊತ್ತಾಗಿದ್ದು ನಾನವನನ್ನೆಷ್ಟು ಪ್ರೀತಿಸುತ್ತಿದ್ದೆನೆಂದು... ಏನಾದರೂ ಪವಾಡ ಜರುಗಬೇಕು. ನನ್ನ ಮದುವೆ ಅವನೊಂದಿಗೆ ನಡೆಯಬೇಕೆಂದು ದೇವರಲ್ಲಿ ಮೊರೆ ಇಟ್ಟಿದ್ದೆ.

ಆದರೆ... ಯಾವ ಜಾದೂ ನಡೆಯಲಿಲ್ಲ. ಮೈಥಿಲಿ ಚಂದ್ರುವಿನ ಹೆಂಡತಿಯಾದಳು. ಸಂಜೆ ಉಡ್‌ಲ್ಯಾಂಡ್ಸ್ ಹೋಟಲ್‌ನಲ್ಲಿ ಅದ್ದೂರಿಯ ರಿಸೆಪ್ಷನ್ ಏರ್ಪಾಟಾಗಿತ್ತು. ಏನೂ ನಡೆದೇ ಇಲ್ಲವೆಂಬಂತೆ ನಡೆದುಕೊಂಡ ಚಂದ್ರು, "ಇವರು ನಮ್ಮ ಬಾಜೂ ಮನಿ ವಿಮಲಾ ಕಾಕು. ಅವ್ವಗ ಭಾಳ ಬೇಕಾದಾವ್ರು. ಮತ್ತವರ ಮಗಳು..." ಎಂದು ಪರಿಚಯಿಸಿದ್ದ. ನನ್ನ ಹೃದಯ ಒಡೆದು ಚೂರಾದಂತಾಗಿತ್ತು. ರಾತ್ರಿಯೆಲ್ಲ ಬಿಕ್ಕಿದ್ದೆ. ನವ ಜೋಡಿ ಮನೆಯ ಮುಂದೆ ಓಡಾಡಿದ್ದೇ ಬಂತು. ಆಗಾಗ, "ಮೈಥಿಲಿ... ಮೈಥೂ..." ಎಂಬ ಅವನ ಕರೆ ಕೇಳಿಸುತ್ತಿತ್ತು. ಅವಳಿಗೆ ಹೊಸ ನವೀನ ಮಾದರಿಯ ಡ್ರೆಸ್‌ಗಳು ಬಂದಿದ್ದವು. ಅವರ ಓಡಾಟ ನಾಲ್ಕಾರು ಬೀದಿಯವರ ಕಣ್ಣು ಕುಕ್ಕುತ್ತಿತ್ತು. ಮೈಥಿಲಿಗೆ ವೀಸಾ ತಕ್ಷಣಕ್ಕೆ ಸಿಗದ ಕಾರಣ ಅವಳು ಹುಬ್ಬಳ್ಳಿಯಲ್ಲೇ ಉಳಿದಳು. ಅವರ ಪತ್ರಗಳೇನು? ಫೋನುಗಳೇನು? ಅದಕ್ಕಾಗೇ ಅವರ ಮನೆಯಲ್ಲಿ ಫೋನ್ ಬಂತು. ಸರಜಕ್ಕ ಸಂಭ್ರಮದಿಂದ ಸೊಸೆಯ ಕೈಯಿಂದ ಹಬ್ಬ ಹರಿದಿನ, ಮಂಗಳಗೌರಿ, ಶ್ರಾವಣಗೌರಿ ಇತ್ಯಾದಿ ಪೂಜೆಗಳನ್ನು ಮಾಡಿಸಿ ಸಂತೋಷಪಟ್ಟರು. ಈಗ ನಳಿನಿಯೂ ಬಂದು ಓಡಾಡುತ್ತಿದ್ದಳು. ಚಂದ್ರು ಮೂರು ತಿಂಗಳಿಗೊಮ್ಮೆ ಬರುತ್ತಿದ್ದ. ಹೆಂಡತಿಯನ್ನು ಭೇಟಿಯಾಗಲು... ಹೋಟಲ್‌ನಲ್ಲಿ ರೂಮ್ ಮಾಡುತ್ತಿದ್ದ. ದಂಪತಿ ದಿನಪೂರ್ತಿ ಮನೆಯಲ್ಲಿದ್ದು ರಾತ್ರಿ ಹೋಟಲ್ಲಿಗೆ ಹೋಗುತ್ತಿದ್ದರು. ಬೀದಿಯ ಜನಕ್ಕೆಲ್ಲ ವಿಶೇಷವೆನಿಸಿ... "ಎಲ್ಲಾ ಅತಿಯಾತು" ಎನ್ನುತ್ತ ಮುಸಿನಗುತ್ತ ನೋಡಿದ್ದರು. ಸ್ನೇಹಿತನ ಕಾರು ತಂದು ಹೆಂಡತಿಗೆ ಕಲಿಸಿದ್ದೇನು... ಅದರಲ್ಲಿ ಓಡಾಡಿಸಿದ್ದೇನು... ಆಗ ಅಕಸ್ಮಾತ್ ಬೀದಿಯಲ್ಲಿ